# 9

# ನಮ್ಮ ದೇವರು ಪ್ರೀತಿಸುವಾತನು

"ನಮ್ಮ ದೇವರು ನೈತಿಕತೆಯುಳ್ಳವನು" ಎಂಬ ಪಾಠದಲ್ಲಿ ಪರಿಶುದ್ಧತೆಯು ದೇವರ ಅತಿಶ್ರೇಷ್ಠವಾದ ಇಲ್ಲವೇ ಆಧಾರ ತತ್ವದ ಲಕ್ಷಣವಾಗಿದೆ ಮತ್ತು ಆತನು ಪರಿಶುದ್ಧನಾಗಿರುವಂತೆ ನಾವೂ ಪರಿಶುದ್ಧರಾಗಿರಲು ಕರೆಯಲ್ಪಟ್ಟಿದ್ದೇವೆ ಎಂಬುದನ್ನು ಕಲಿತುಕೊಂಡಿದ್ದೇವೆ. ದೇವರ ಎಲ್ಲಾ ಗುಣಲಕ್ಷಣಗಳಂತೆಯೇ, ಈ ಗುಣಲಕ್ಷಣವು ಆತನ ದೈವಿಕ ಸ್ವಭಾವವಾಗಿದೆ. ದೇವರನ್ನು ಬಿಟ್ಟು ಅದರ ಪರಿಪೂರ್ಣತೆಯಲ್ಲಿ ಅದನ್ನು ಗ್ರಹಿಸಲಿಕ್ಕೆ ಸಾಧ್ಯವಿರುವದಿಲ್ಲ. ನಮಗಿರುವ ಎಲ್ಲಾ ಆತನ ಪ್ರತ್ಯಕ್ಷತೆಗಳ ಆಧಾರವು ಅದಾಗಿದೆ. ಆತನು ಪರಿಶುದ್ಧನಾಗಿರುವದರಿಂದ ನೈತಿಕವಾಗಿ ವರ್ತಿಸುವುದು ಆತನ ಸ್ವಭಾವವಾಗಿದೆ.

ದೇವರ ಇನ್ನೊಂದು ಲಕ್ಷಣವು ಪ್ರೀತಿಯಾಗಿದೆ. ಪರಿಶುದ್ಧತೆಯಂತೆಯೇ ಪ್ರೀತಿಯು ದೇವರಲ್ಲಿ ಮಾತ್ರವೇ ಅದರ ಪರಿಪೂರ್ಣತೆಯಲ್ಲಿ ಕಂಡು ಬರುತ್ತದೆ. "ದೇವರು *ಪ್ರೀತಿಯಾಗಿದ್ದಾನೆ"* ಎಂದು ನಾವು ಓದುವಂತೆ ಪ್ರೀತಿಸುವಾತನಾಗಿರುವುದು ದೇವರ ಸ್ವಭಾವದ ಭಾಗವಾಗಿದೆ (1 ಯೋಹಾನ 4:8 ಒತ್ತಿ ಹೇಳಿದ್ದು ನನ್ನದು).

## ವಿವರಿಸಲ್ಪಟ್ಟ ಆತನ ಪ್ರೀತಿ

ದೇವರ ಪರಿಪೂರ್ಣ ಪ್ರೀತಿಯ ಬಗ್ಗೆ ಮಾತಾಡುವದರಲ್ಲಿ ಮಾನವರಿಗೆ ತೊಂದರೆಯಿದೆ. ಯಾವುದೇ ಪರಿಪೂರ್ಣವಾದದ್ದರ ಬಗ್ಗೆ ಮಾತಾಡುವದರಲ್ಲಿ ನಮಗೆ ಕಷ್ಟವಿದೆ. ವಾಸ್ತವವಾಗಿ ಬಹಳ ಸಲ ಪರಿಪೂರ್ಣತೆಯು ನಮ್ಮನ್ನು ಸ್ವಲ್ಪ ದಿಗ್ಭ್ರಮೆಗೊಳಿಸುತ್ತದೆ. ಪರಿಪೂರ್ಣತೆಯ ಬಗೆಗಿರುವ ನಮ್ಮ ಎಲ್ಲಾ ಮಾತಿಗಾಗಿ ನಮ್ಮ ಅಪರಿಪೂರ್ಣತೆಯ ಬಗ್ಗೆ ನೋವಿನ ಅರುಹು ಉಳ್ಳವರಾಗಿರುತ್ತೇವೆ. "ನಾನು ಪರಿಶುದ್ಧನಲ್ಲ, ಆದರೆ ...?" ಎಂಬ ಮಾತಿನೊಂದಿಗೆ ಇನ್ನೊಬ್ಬನ ಮಾತುಗಳನ್ನು, ಕೃತ್ಯಗಳನ್ನು ಇಲ್ಲವೇ ಉದ್ದೇಶವನ್ನು ವಿರೋಧಿಸಿದ್ದನ್ನು ನಾವು ಎಷ್ಟೋ ಸಲ ಕೇಳಿದ್ದೇವಲ್ಲವೇ?

"ಸದ್ಗುಣಗಳ" ಕಡೆಗೆ ಬರುವಾಗ, ನಮ್ಮೆಲ್ಲರಿಗೆ ನಮ್ಮ ಮಿತಿಗಳಿರುತ್ತವೆ. ಇದು ಯಾವಾಗಲೂ ಸತ್ಯವಾಗಿರುತ್ತದೆ. ಚರಿತ್ರೆಯಲ್ಲಿ ಪ್ರಸ್ತಾವಿಸಿದ ಪ್ರಮುಖ ಆಲೋಚನೆಗಳಲ್ಲಿ ಸದ್ಗುಣವು ಒಂದಾಗಿತ್ತು. ಕ್ರಿ.ಪೂ. ನಾಲ್ಕನೆಯ ಶತಮಾನದ ಗ್ರೀಕರು ಜ್ಞಾನ, ಧೈರ್ಯ ಮಧ್ಯಪಾನ ನಿಯಂತ್ರಣ ಹಾಗೂ ನ್ಯಾಯ ಇವು ನಾಲ್ಕು ಪ್ರಮುಖ ಸದ್ಗುಣಗಳೆಂದು ನಂಬಿದ್ದರು.[1] ಕ್ರೈಸ್ತರ ಯುಗದ ಮಧ್ಯ ಕಾಲಗಳಲ್ಲಿ ಪಂಡಿತರು ಮೇಲೆ ಹೇಳಿದ ಸದ್ಗುಣಗಳನ್ನು "ಸ್ವಾಭಾವಿಕವಾದವುಗಳು" ಎಂದು ನೋಡಿದರು. ನಂಬಿಕೆ, ನಿರೀಕ್ಷೆ ಹಾಗೂ ಪ್ರೀತಿಯನ್ನು "ದೈವಜ್ಞಾನ ಶಾಸ್ತ್ರೀಯ" ಸದ್ಗುಣಗಳೆಂದು ಯೋಚಿಸಿದರು.

ಸದ್ಗುಣದ ಬಗೆಗಿನ ತನ್ನ ನೋಟವನ್ನು ಬೈಬಲು ಎಷ್ಟೋ ಹೆಚ್ಚಾಗಿ ಒಳಗೊಂಡಿರುತ್ತದೆ. "ದೇವರೇ, ನನ್ನಲ್ಲಿ ಶುದ್ಧ ಹೃದಯವನ್ನು ನಿರ್ಮಿಸು" ಎಂಬ ದಾವೀದನ ಕೂಗಿಗೆ ಸಂಬಂಧಿಸ ಬಹುದು. ಪೇತ್ರನು ಯೇಸುವಿನ ಪಾದಗಳ ಬಳಿಯಲ್ಲಿ ಅಡ್ಡಬಿದ್ದು, "ಕರ್ತನೇ, ನನ್ನಿಂದ ದೂರ ಹೋಗು, ನಾನು ಪಾಪಿಯಾದ ಮನುಷ್ಯನು" (ಲೂಕ 5:8) ಎಂದು ಹೇಳಿದ ಮಾತುಗಳನ್ನು ನಾವು ಪ್ರತಿಧ್ವನಿಸಬಹುದು. ಸದ್ಗುಣ ಹಾಗೂ ಪ್ರೀತಿ, ಕ್ರೈಸ್ತ ಗುಣಗಳನ್ನು ಒತ್ತಿ ಹೇಳಿದ ಹೊಸ ಒಡಂಬಡಿಕೆಯ ಎರಡು ಮುಖ್ಯ ವಾಕ್ಯಗಳಲ್ಲಿ ನಿಕಟವಾಗಿ ಸಂಬಂಧಿಸಿದ್ದನ್ನು ಗಮನಿಸಿರಿ:

> ಕಡೇ ಮಾತೇನಂದರೆ, ಸಹೋದರರೇ, ಯಾವುದು ಸತ್ಯವೂ ನ್ಯಾಯವೂ ಶುದ್ಧವೂ ಪ್ರೀತಿಕರವೂ [*prosphiles*] ಆಗಿದೆಯೋ, ಯಾವುದು ಸದ್ಗುಣವಾಗಿದೆಯೋ ಯಾವುದು ಮನೋಹರವೋ [*arete* = ಸದ್ಗುಣ ನೈತಿಕ ಶ್ರೇಷ್ಠತೆ] ಯಾವುದು ಸ್ತುತಿಗೆ ಯೋಗ್ಯವೋ ಅವೆಲ್ಲವುಗಳನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ (ಫಿಲಿಪ್ಪಿ 4:8).

> ... ಎಲ್ಲಾ ಶ್ರದ್ಧೆಯನ್ನು ವಹಿಸಿ, ನಿಮ್ಮ ನಂಬಿಕೆಗೆ ಸದ್ಗುಣವನ್ನೂ [*arete* = ಸದ್ಗುಣ, ನೈತಿಕ ಶ್ರೇಷ್ಠತೆ]ಣಿ ನಿಮ್ಮ ಸದ್ಗುಣಕ್ಕೆ [*arete* = ಸದ್ಗುಣ, ನೈತಿಕ ಶ್ರೇಷ್ಠತೆ] ಜ್ಞಾನವನ್ನೂ ಕೂಡಿಸಿರಿಣಿ ಹಾಗೂ ನಿಮ್ಮ ಜ್ಞಾನಕ್ಕೆ ಸ್ವ-ನಿಯಂತ್ರಣವನ್ನು ಮತ್ತು ಸ್ವ-ನಿಯಂತ್ರಣಕ್ಕೆ ತಾಳ್ಮೆಯನ್ನು ಮತ್ತು ನಿಮ್ಮ ತಾಳ್ಮೆಗೆ ಭಕ್ತಿಯನ್ನೂ, ಹಾಗೂ ನಿಮ್ಮ ಭಕ್ತಿಗೆ ಸಹೋದರ ದಯೆಯನ್ನೂ [*philadelphia*], ಹಾಗೂ ನಿಮ್ಮ ಸಹೋದರ ದಯೆಗೇ [*philadelphia*] ಪ್ರೀತಿಯನ್ನೂ [*agape*] ಕೂಡಿಸಿರಿ (2 ಪೇತ್ರ 1:5-7).

ನೈತಿಕತೆ ಮತ್ತು ಪ್ರೀತಿ ಸಹವಾಸದಲ್ಲಿರಬೇಕು ಆ ಘನವಾದ ಮತ್ತು ಗೌರವುಳ್ಳ ಸಹವಾಸದಲ್ಲಿ ನಾವು ಸೇರಿಕೊಳ್ಳಬೇಕು. ಇದು ಕ್ರೈಸ್ತರಾದ ನಮಗೆ ಆಹ್ವಾನವಾಗಿದೆ.

ಕೊರತೆಯ ಬಗೆಗಿನ ನಮ್ಮ ಸಾಮಾನ್ಯ ಭಾವನೆಯು ಎರಡು ದಿಕ್ಕಿನಿಂದ ಬರುತ್ತದೆ: ಮೊದಲನೆಯದು, ನಾವು ವಾಸಿಸುತ್ತಿರುವ ಲೋಕದ ಹೆಚ್ಚಾದ ಭಾಗದಲ್ಲಿ "ಪ್ರೀತಿ" ಎಂಬುದರ ಅರ್ಥವೇನೆಂಬುದರ ತಿಳುವಳಿಕೆಯು ಕಳೆದು ಹೋಗಿದೆ. ನಮ್ಮ ಭಾಷೆಯು ನಮ್ಮನ್ನು ಅಲ್ಲಗಳೆಯುತ್ತದೆ: "ನಾನು ಐಸ್‌ಕ್ರಿಮ್ ಪ್ರೀತಿಸುತ್ತೇನೆ"ಣಿ "ನಾನು ದೇವರನ್ನು ಪ್ರೀತಿಸುತ್ತೇನೆ"ಣಿ "ನಾನು ನಿನ್ನನ್ನು ಬಹಳ ಪ್ರೀತಿಸುತ್ತೇನೆಣಿ ನೀನು ನನಗೆ ಬೇಕು"ಣಿ "ಮೇಲಿನ ಅದೃಶ್ಯವಾದ ಸಂಗತಿಗಳ ಬಗ್ಗೆ ಕಥೆ ಹೇಳಲು ನಾನು ಪ್ರೀತಿಸುತ್ತೇನೆ"ಣಿ "ನನ್ನ ವಾಹನವನ್ನು ನಾನು ಪ್ರೀತಿಸುತ್ತೇನೆ." ಎರಡನೆಯದು, ವಸ್ತುಗಳಿಗೆ ಹಾಗೂ ಜನರಿಗೆ ನಮ್ಮ ಸಂಬಂಧದಲ್ಲಿ "ಪ್ರೀತಿಯನ್ನು" ಅರ್ಥಮಾಡಿಕೊಳ್ಳುವ ಕೊರತೆಯ ಕಾರಣದಿಂದ, ದೇವರ ಪ್ರೀತಿಯಿಂದ ಭ್ರಮೆಗೊಳಿಸಲ್ಪಟ್ಟಿದ್ದೇವೆ. ಈ ರಹಸ್ಯವು ದೊಡ್ಡದೂ ಉತ್ತಮವಾದದ್ದೂ ಆಗಿದೆ. ಆದರೆ ಮಾನವ ಮಟ್ಟದಲ್ಲಿ ಪ್ರೀತಿಯ ಅರ್ಥವನ್ನು ನಾವು ಕಳೆದುಕೊಂಡರೆ, ದೇವರ ಮಟ್ಟದಲ್ಲಿಯ ಪ್ರೀತಿಯನ್ನು ಅರ್ಥ ಮಾಡಿಕೊಳ್ಳುವದನ್ನು ನಾವು ನಿರೀಕ್ಷಿಸುವುದು ಹೇಗೆ?

ಮೋಸಗೊಳಿಸುವ ಪ್ರಶ್ನೆಯನ್ನು ನಿಯಂತ್ರಿಸುವ ಮಾರ್ಗವಿದೆ. ಯಾಕಂದರೆ ಪೌಲನು ಹೀಗೆ ಪ್ರಾರ್ಥಿಸಿದ್ದಾನೆ,

> ... *ನೀವು ದೇವರ ಪ್ರೀತಿಯಲ್ಲಿ ನೆಲೆಗೊಂಡು ನಿಂತು* ಅದರ ಅಗಲ, ಉದ್ದ, ಎತ್ತರ, ಆಳ ಎಷ್ಟೆಂಬುದನ್ನು ದೇವಜನರೆಲ್ಲರೊಂದಿಗೆ ಗ್ರಹಿಸಲೂ ಜ್ಞಾನಕ್ಕೆ ಮೀರುವ ಕ್ರಿಸ್ತನ ಪ್ರೀತಿಯನ್ನು ತಿಳಿದು ಕೊಳ್ಳಲೂ ಪೂರ್ಣಶಕ್ತರಾಗಿದ್ದು ದೇವರ ಸಂಪೂರ್ಣತೆಯ ಮಟ್ಟಿಗೂ ಪರಿಪೂರ್ಣರಾಗುವ ಹಾಗೆ ನಿಮಗೆ ದಯಪಾಲಿಸಲಿ ಎಂದೂ ಆತನನ್ನು ಬೇಡಿಕೊಳ್ಳುತ್ತೇನೆ (ಎಫೆಸ 3:17ಬಿ-19ಣಿ ಒತ್ತಿ ಹೇಳಿದ್ದು ನನ್ನದು).

ನಮ್ಮ ಭಾಗವಾಗಿ ಅದು ಮೂರು ಚಟುವಟಿಕೆಗಳನ್ನು ಒಳಗೊಂಡಿರುತ್ತದೆ: ಪ್ರಾರ್ಥನೆ, ಅಧ್ಯಯನ ಹಾಗೂ ರೂಢಿಸುವಿಕೆ. ಪ್ರಾರ್ಥನೆಯಲ್ಲಿ ನಾವು ಮೊಣಕಾಲೂರುವಂತೆ ನಡಿಸದೇ ಇರುವ ದೇವರ ಪ್ರೀತಿಯ ಯಾವುದೇ ಹುಡುಕುವಿಕೆಯ ಸೋಲಿನಲ್ಲಿ ಅಂತ್ಯಗೊಳ್ಳುವುದು. ದೀನಭಾವ ಮತ್ತು ಹುಡುಕುವಿಕೆಯ ಪ್ರಾರ್ಥನೆಯು ಯಶಸ್ವಿಯಾದ ಹುಡುಕುವಿಕೆಯಲ್ಲಿ ಅಗತ್ಯವಾಗಿದೆ. ಹಾಗಿದ್ದರೂ ಪ್ರಾರ್ಥನೆಯು ಸಾಕಷ್ಟಾಗಿರುವದಿಲ್ಲ.

ದೇವರ ಪ್ರೀತಿಯನ್ನು ಹೆಚ್ಚು ಉತ್ತಮವಾಗಿ ಅರ್ಥಮಾಡಿಕೊಳ್ಳುವದಕ್ಕಾಗಿ ದೇವರ ವಾಕ್ಯದ ಅಧ್ಯಯನವು ಅವಶ್ಯಕವಾದದ್ದಾಗಿದೆ. ಆತನ ವಾಕ್ಯವು ನಮ್ಮ ಬೋಧನೆ ಗೋಸ್ಕರ ಬರೆಯಲ್ಪಟ್ಟಿದೆ (ರೋಮಾಪುರ 15:4) ಹಾಗೂ ದೇವರ ಮಾರ್ಗದಲ್ಲಿ ಬೆಳಕು ಹೊಂದಲು ನಾವು ಅದರ ಅಧ್ಯಯನ ಮಾಡಬೇಕು (2 ತಿಮೊಥೆ 3:15). ದೇವರ ನೈತಿಕ ಶ್ರೇಷ್ಠತೆಯನ್ನೂ ಸರ್ವಶಕ್ತಿಯನ್ನೂ ಸರ್ವವ್ಯಾಪಕತ್ವವನ್ನೂ ಸರ್ವಜ್ಞಾನವನ್ನೂ ಆಗಲೇ ಒತ್ತಿ ಹೇಳಿದ್ದೇವೆ. ದೇವರಲ್ಲಿಯ ಈ ಎಲ್ಲಾ ಲಕ್ಷಣಗಳ ಮಿತಿಯಿಲ್ಲದ ಸ್ವಭಾವವನ್ನು ಗಮನಿಸಿದ್ದೇವೆ. ಪ್ರೀತಿಯೂ ಸಹ ದೇವರಲ್ಲಿ ಮಿತಿಯಿಲ್ಲದ್ದಾಗಿದೆ. ದೇವರ ಜನರೂ ಆತನ ಪ್ರೀತಿಯ ಬಗ್ಗೆ ನಿತ್ಯವಾದದ್ದರಂತೆ, ಸದಾಕಾಲ ಇರುವಂಥದ್ದರಂತೆ ಮಾತಾಡಿರುವರು (1 ಅರಸು 10:9ಣ ಯೆರೆಮೀಯ 31:3ಣ ರೋಮಾಪುರ 8:35-39).

ದೇವರ ಪ್ರೀತಿಯ ನಿತ್ಯವಾದ ಸ್ವಭಾವವು ಒಂದು ಪ್ರಶ್ನೆಯನ್ನು ಹುಟ್ಟಿಸುತ್ತದೆ. ಮಾನವನನ್ನು ಸೃಷ್ಟಿಸುವ ಮೊದಲು ದೇವರು ಯಾರನ್ನು ಪ್ರೀತಿಸಿದನು? ಸಮಯದ ಮೊದಲು ನಮ್ಮನ್ನು ನಾವು ಕಂಡುಕೊಳ್ಳುವ ಕೋಶದಲ್ಲಿ ನಿತ್ಯತ್ವವಿತ್ತು ಹಾಗೂ ದೇವರು ಅಲ್ಲಿದ್ದನು (ಯೆಶಾಯ 57:15). ನಮ್ಮ ಮುಂದಿರುವ ಪ್ರಶ್ನೆಯು ಸಮಂಜಸವಾದದ್ದಾಗಿದೆ. ಹಾಗೆಯೇ ಉತ್ತರವು ನಿರ್ಣಾಯಕವಾದದ್ದಾಗಿದೆ. ಪ್ರಶ್ನೆಯು ಸಮಂಜಸವಾದದ್ದಾಗಿದೆ ಯಾಕಂದರೆ ಅವಶ್ಯಕತೆಯ ನಿಮಿತ್ತವಾಗಿ ಅದು ಪ್ರೀತಿಯ ವಿಷಯಕ್ಕೆ ಅನ್ವಯವಾಗುತ್ತದೆ. ಉತ್ತರವು ನಿರ್ಣಾಯಕವಾದದ್ದಾಗಿದೆ. ಯಾಕಂದರೆ ಅದು ದೈವತ್ವದ ವ್ಯಕ್ತಿಗಳನ್ನು ಒಳಗೊಂಡಿರುತ್ತದೆ. ಸೃಷ್ಟಿಗಿಂತ ಮೊದಲು ದೇವರ ಪರಿಪೂರ್ಣ ಪ್ರೀತಿಯು ಅಸ್ತಿತ್ವದಲ್ಲಿ ಇದ್ದುದರಿಂದ, ಈ ಪ್ರೀತಿಯು ತಂದೆ, ಕುಮಾರ ಮತ್ತು ಪರಿಶುದ್ಧಾತ್ಮನ ಮಧ್ಯದಲ್ಲಿ ಸ್ವಯಂ-ಸಂಪರ್ಕವಾಗಿತ್ತೆಂದು ನಿರ್ಣಯಕ್ಕೆ ಬರಬೇಕಾಗುತ್ತದೆ. “ಲೋಕವು ಹುಟ್ಟುವದಕ್ಕಿಂತ ಮುಂಚೆಯೇ ನೀನು ನನ್ನನ್ನು ಪ್ರೀತಿಸಿದ್ದೀ” (ಯೋಹಾನ 17:24ಬಿ) ಎಂದು ಹೇಳುವಲ್ಲಿ ತಂದೆಗೆ ಸಂಬಂಧಿಸಿ ಹೇಳಿದನು. ಅನಂತರ ವಿಶ್ವದ ಮೇಲೆ ಅವಲಂಭಿಸದೇ, ದೇವರು ತನ್ನೊಂದಿಗೆ ಪೂರ್ಣ ಸಂಪರ್ಕವನ್ನು, ತನ್ನೊಂದಿಗೆ ಪೂರ್ಣ ಭಕ್ತಿಯನ್ನು, ತನ್ನನ್ನು ಸಂಪೂರ್ಣವಾಗಿ ಕೊಡುವಂಥದ್ದನ್ನು ಇಟ್ಟುಕೊಂಡಿದ್ದನು.

ಪರಿಪೂರ್ಣವಾದ ಅರ್ಥದಲ್ಲಿ ಇದು ದೇವರ ಭಯಭಕ್ತಿಯ ಪ್ರೀತಿಯಾಗಿದೆ. ಪರಿಪೂರ್ಣ ಸಾಮರಸ್ಯ, ಮಿತಿಯಿಲ್ಲದ ಸಮಾಧಾನ, ಶ್ರೇಷ್ಠವಾದ ಸ್ವಯಂಸಿದ್ಧತೆ, ನಿಶ್ಚಯವಾದ ದೃಢತೆಣ[2] ಹಾಗೂ ಪರಿಶುದ್ಧ ತ್ರಿತ್ವದ ಸನ್ನಿವೇಷದೊಳಗೆ ಪರಿಶುದ್ಧ ಆಶೀರ್ವಾದವು ಅಸ್ತಿತ್ವದಲ್ಲಿರುತ್ತದೆ. ಇದು ದೇವರ ಅತ್ಯುನ್ನತವಾದ ಪ್ರೀತಿ. ಆತನ ಪ್ರೀತಿಯು ಆತನಲ್ಲಿಯೇ ಇರುತ್ತದೆ.

## ಆತನ ಪ್ರೀತಿ ವಿಸ್ತರಿಸಲ್ಪಟ್ಟಿತು

ದೇವರು ತನ್ನ ಮಹಾ ಪ್ರೀತಿಯನ್ನು ತನ್ನಷ್ಟಕ್ಕೆ ಇಟ್ಟುಕೊಳ್ಳುವದಿಲ್ಲಣ ಅದು ಕೊಡ ಲ್ಪಡುವಂಥದ್ದಾಗಿರುತ್ತದೆ. ಅಂದರೆ ಆತನ ಪ್ರೀತಿಯನ್ನು ಹೊಂದಿಕೊಳ್ಳುವಂಥದ್ದು ಅದರಿಂದ ಹೊರಗೆ ಇರುತ್ತದೆ. ಜೀವಿಸುವ ದೇವರು ನಮಗೆ ಜೀವಕೊಡುವಂತೆ ಹಾಗೂ ಪರಿಪೂರ್ಣ ದೇವರು ನಮಗೆ ಸತ್ಯವನ್ನು ಕೊಡುವಂತೆ, ಪ್ರೀತಿಯುಳ್ಳ ದೇವರು ತನ್ನನ್ನು ನಮಗೆ ಕೊಡುತ್ತಾನೆ! ನಮಗಾಗಿ ದೇವರ ಪ್ರೀತಿಯ ಸುರಿಸುವಿಕೆಯ ಮೇಲೆ ಕೇಂದ್ರೀಕ ರಿಸುವಾಗ, ನಮ್ಮ ಜೊತೆಯವರಲ್ಲಿ ಇಂಥ ಪ್ರೀತಿಗೆ ನಾವು ಪರಿಚಿತರು ಆಗಿರುವದಿಲ್ಲವೆಂದು ಕಂಡುಕೊಳ್ಳುತ್ತೇವೆ. ದೇವರಲ್ಲಿ ಭಯಭಕ್ತಿಯ ಬಲದ ಬಗ್ಗೆ, ಜ್ಞಾನದ ಮತ್ತು ನಿಕಟ ಸಾನ್ನಿಧ್ಯದ ಬಗ್ಗೆ ನಾವು ಯೋಚಿಸುವಾಗ, ನಾವು ನಿಶ್ಚಿಂತೆ ಮನೋಭಾವನೆಯುಳ್ಳವರು ಆಗಿರಬಹುದು - ಯಾಕಂದರೆ ಈ ಎಲ್ಲಾ ಗುಣಗಳು ಆತನ ಪರಿಶುದ್ಧತೆ, ಶುದ್ಧತೆ, ನೈತಿಕತೆ

ಹಾಗೂ "ನೀತಿಗಳ" ಕೆಳಗೆ ಕಾರ್ಯತತ್ಪರವಾಗಿರುತ್ತವೆ. ದೇವರು ಪ್ರೀತಿಸುವವನು ಎಂಬ ಅರುಹು ಹೊಂದುವಾಗ, ಅದು ನಮ್ಮನ್ನು ವಿಶ್ರಾಂತಿಯಲ್ಲಿಡುವುದು. ಯಾಕಂದರೆ ದೇವರು ಪ್ರೀತಿಸುವಾತನು ಆಗಿದ್ದು, ಆತನ ಪರಿಶುದ್ಧತೆಯ ಪ್ರತ್ಯಕ್ಷಪಡಿಸುವಿಕೆಯಾಗಿದೆ ಯೆಂದು ನಾವು ಹೇಳಬಹುದು.

ನಮಗೆ ಅಂಥ ಪ್ರೀತಿಯ ದೇವರು ಇದ್ದಾನೆ ಎಂದು ತಿಳಿಯುವದರಲ್ಲಿ ನಾವು ನಿಜವಾಗಿಯೂ ಆಳವಾದ ಕೃತಜ್ಞತೆಯಿಂದ ತುಂಬಿದವರಾಗಿರುತ್ತೇವೆ. ಹಾಗಿದ್ದರೂ ನಮಗಾಗಿರುವ ಆತನ ಪ್ರೀತಿಯ ಮತ್ತು ಆತನಿಗಾಗಿರುವ ನಮ್ಮ ಪ್ರೀತಿಯ ಮಧ್ಯದಲ್ಲಿಯ ದೊಡ್ಡ ಅಂತರದಿಂದ ನಾವು ಗಲಿಬಿಲಿಗೊಂಡಿರ ಬಹುದು. ಪ್ರಾರ್ಥನೆಯ ಬಗ್ಗೆ ಯೇಸುವಿನ ಶಿಷ್ಯರು ಭಾವಿಸಿದಂತೆ ಆತನ ಪ್ರೀತಿಯ ಬಗ್ಗೆ ನಾವು ಭಾವಿಸಬಹುದು. ಒಂದು ಸಂದರ್ಭದಲ್ಲಿ ಯೇಸುವು ಪ್ರಾರ್ಥನೆ ಮಾಡಿ ಮುಗಿಸಿದಾಗ, ಆತನ ಶಿಷ್ಯರಲ್ಲಿ ಒಬ್ಬನು, "ಕರ್ತನೇ, ನಮಗೂ ಪ್ರಾರ್ಥಿಸುವದನ್ನು ಕಲಿಸು" (ಲೂಕ 11:1ಬಿ) ಎಂದು ಬೇಡಿಕೊಂಡನು. ದೇವರ ಪ್ರೀತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಲೌಕಿಕ ಮನೋ ಭಾವನೆಯಿಂದ ಹೊರಗಿರಬೇಕು. ಆತನ ಪ್ರೀತಿಯ ವಿಫುಲತಗೆ ಉತ್ತರ ಕೊಡಲು ನಾವು ಬಯಸಿದರೆ ದೇವರೊಂದಿಗೆ ಮನಸ್ಸುಗಳ ಸಮ್ಮಿಳಿತವಿರಬೇಕು.

ಮೊದಲನೆಯದಾಗಿ, "ಕ್ರೈಸ್ತ ಅರ್ಥದಲ್ಲಿ ಪ್ರೀತಿಯು ಮನೋ ಉದ್ವೇಗವೆಂದು ಅಗುವದಿಲ್ಲ. ಅದು ಭಾವನೆಗಳು ಅಲ್ಲ ಆದರೆ ಚಿತ್ತದ ಸ್ಥಿತಿಯಾಗಿರುತ್ತದೆ ... ."[3] ಭೋಗಾಸಕ್ತಿಯನ್ನು ಪ್ರೀತಿಯೊಂದಿಗೆ ಸಮನಾಗಿ ಮಾಡುತ್ತಿರುವ ಸಮಾಜದಲ್ಲಿ ಬೆಳೆದ ನಮಗೆ ಇದು ಅಪಘಾತವನ್ನುಂಟು ಮಾಡಬಹುದಂತಾಗಬಹುದು. ಪ್ರೀತಿಯು ತೊಂಭತ್ತು ಶತ ಲೈಂಗಿಕತೆ ಎಂದು ನಂಬುವ ಸಮಾಜದಲ್ಲಿ ದೇವರ ಪ್ರೀತಿಯನ್ನು ಅರ್ಥಮಾಡಿಕೊಳ್ಳಲು ಇಲ್ಲವೇ ಮೆಚ್ಚಿಕೊಳ್ಳಲು ಶಕ್ತವಾಗುವದರಿಂದ ಬಹಳ ದೂರದಲ್ಲಿದೆ. ಹೊಸ ಒಡಂಬಡಿಕೆಯಲ್ಲಿ *eros* ಎಂಬ ಪದವು ಕಂಡು ಬರದಿದ್ದರೂ ಕಾಮ ಪ್ರಚೋದಕತ್ವದ ಗಂಡಾಂತರಗಳು ಒತ್ತಿಹೇಳ ಲ್ಪಟ್ಟಿವೆ (ಮತ್ತಾಯ 5:27-29ಣಿ 1 ಕೊರಿಂಥ 6:18-20).

ನಿಶ್ಚಯವಾಗಿಯೂ, ದೇವರಿಂದ ಒಪ್ಪಿಗೆಯಾದ ಪ್ರೀತಿಯು ಅದಕ್ಕಿಂತ ಹೆಚ್ಚಾದ ಉನ್ನತ ಮಟ್ಟದಲ್ಲಿ ಪ್ರದರ್ಶಿಸಲ್ಪಡತಕ್ಕದ್ದು. ಮಾನವ ಕುಲವನ್ನು ವೃದ್ಧಿ ಗೊಳಿಸಲು ಹಾಗೂ ಲೈಂಗಿಕ ಪ್ರೀತಿಯನ್ನು ಹಂಚಿಕೊಳ್ಳುವ ನಿಕಟ ಸಂಬಂಧವನ್ನು ಒದಗಿಸುವದಕ್ಕಾಗಿ ಮದುವೆಯನ್ನು ನೇಮಿಸಿದ್ದು ದೇವರು ಸೂಚಿಸಿದ ಮಾರ್ಗವಾ ಗಿದೆ. ದೇವರು ಯೋಜಿಸಿದಂತೆ ಮದುವೆಯು ಕಾರ್ಯಮಾಡುವಾಗ, ಕ್ರಿಸ್ತನಿಗೂ ಆತನ ಸಭೆಗೂ ಇರುವ ಸಂಬಂಧಕ್ಕೆ ಅದು ಹೋಲಿಸಲ್ಪಡುವಷ್ಟು ಹೆಚ್ಚು ಗೌರವದಲ್ಲಿ ಇಡಲ್ಪಟ್ಟಿದೆ (ಎಫೆಸ 5:22-33).

ಸ್ನೇಹವು ಪ್ರೀತಿಯ ಇನ್ನೊಂದು ಸುಂದರವಾದ ಪ್ರದರ್ಶಿಸುವಿಕೆಯಾಗಿದೆ. "ಪ್ರಾಣವನ್ನೇ ಸ್ನೇಹಿತರಿಗೋಸ್ಕರ ಕೊಡುವ ಪ್ರೀತಿಗಿಂತ ಹೆಚ್ಚಿನ ಪ್ರೀತಿಯು ಯಾವುದೂ ಇಲ್ಲ" (ಯೋಹಾನ 15:13) ಎಂದು ಯೇಸು ಹೇಳಿದ್ದಾನೆ. ಹೊಸ ಒಡಂಬಡಿಕೆಯಲ್ಲಿ *philos* ಎಂದು ಹಲವಾರು ಸಲ ಉಪಯೋಗಿಸಿದ ನಾಮ ಪದವು ಸಾಮಾನ್ಯವಾಗಿ ಸ್ನೇಹವನ್ನು ಸೂಚಿಸುತ್ತದೆ (ಯೋಹಾನ 11:11ಣಿ ಲೂಕ 12:4). *Phileo* ಎಂಬ ಕ್ರಿಯಾಪದವು ಮೇಲಿಂದ ಮೇಲೆ ಪರಿಶುದ್ಧ ಬರಹಗಳಲ್ಲಿ ಉಪಯೋಗಿಸಲ್ಪಟ್ಟ ಸ್ನೇಹಿತರಿಗಾಗಿರುವ ಪ್ರೀತಿಯನ್ನು (ಯೋಹಾನ 11:3) ಯೇಸುವಿಗಾಗಿರುವ ಪ್ರೀತಿ ಯನ್ನು (ಯೋಹಾನ 11:15ಬಿ) ಹಾಗೂ ತಂದೆ ತಾಯಿಗಳ ಪ್ರೀತಿಯನ್ನು (ಮತ್ತಾಯ 10:37) ತೋರಿಸುತ್ತದೆ.

## ಆತನ ಪ್ರೀತಿಯು ಪ್ರದರ್ಶಿಸಲ್ಪಟ್ಟಿತು

ಪ್ರೀತಿಯ ಅತ್ಯುನ್ನತೆಯು ಪ್ರೀತಿಸಲ್ಪಡುವ ದೇವರಿಂದ ತೋರಿಸಲ್ಪಟ್ಟಿದೆ (1 ಯೋಹಾನ 4:8). *Agapao* ಎಂಬುದು ಹೊಸ ಒಡಂಬಡಿಕೆಯಲ್ಲಿ ನೂರಾರು ಸಲ ಉಪಯೋಗಿಸಲ್ಪಟ್ಟಿದೆ. ಜೀವಿಸುವಿಕೆಯ ಅತ್ಯುನ್ನತ ಮಟ್ಟಕ್ಕೆ ಈ ಪ್ರೀತಿಯು ನಮ್ಮನ್ನು ಕರೆಯುತ್ತದೆ. ಅದಕ್ಕೆ ಪರಲೋಕವು ಅದರ ಮೂಲವಾಗಿದೆ ಮತ್ತು ನಮ್ಮನ್ನು ಅಲ್ಲಿಗೆ ತೆಗೆದು ಕೊಂಡು ಹೋಗಲು ರೂಪಿಸಲ್ಪಟ್ಟಿದೆ. ಅದೊಂದು ತಾತ್ಪರ್ಯ ಇಲ್ಲದ್ದಲ್ಲ. ಅದು ಕೇವಲ ಒಂದು ಪ್ರಭಾವವಲ್ಲ. ನಮಗಾಗಿ ದೇವರ ಪ್ರೀತಿಯು ಅಗತ್ಯವಾಗಿದ್ದ ಸಜೀವ ಗುಣವಾಗಿದೆ.

ಚರಿತ್ರೆಯಲ್ಲಿ ಆ ಪ್ರೀತಿಯ ಅತೀ ದೊಡ್ಡ ಪ್ರದರ್ಶಿಸುವಿಕೆಯು, ದೇವರ ಮಹಾ ಪ್ರೀತಿಯ ಕೊಡುಗೆಯು, ಆತನ ಕುಮಾರನಾದ ಯೇಸು ಕ್ರಿಸ್ತನು ಆಗಿದ್ದಾನೆ. ಇದು agape, ಎಲ್ಲವನ್ನೂ ಕೊಡುವ ಪ್ರೀತಿಯಾಗಿದೆ. "ದೇವರು ಲೋಕದ ಮೇಲೆ *ಎಷ್ಟೋ* ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನುಣಿ ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು" (ಯೋಹಾನ 3:16ಣಿ ಒತ್ತಿ ಹೇಳಿದ್ದು ನನ್ನದು). ಯೇಸುವಿನ ಈ ಕೊಡುಗೆಯು ನಮಗಾಗಿ ಇರುವ ತಂದೆಯ ಪ್ರೀತಿಯನ್ನು ತೋರಿಸುವುದು ಅಷ್ಟೇ ಅಲ್ಲ, ಆದರೆ ತಂದೆಗಾಗಿ ಕುಮಾರನಿಗಿರುವ ಪ್ರೀತಿಯನ್ನೂ ತೋರಿಸುತ್ತದೆ. ಗೆತ್ಸೇಮನೆಯಲ್ಲಿ ತನ್ನ ತಂದೆಯ ಚಿತ್ತವು ಮಾಡಲ್ಪಡಬೇಕೆಂದು ಮಹಾ ಯಾತನೆಯಲ್ಲಿ ಯೇಸು ಪ್ರಾರ್ಥಿಸಿದನುಣಿ ಮನ ಪೂರ್ವಕವಾಗಿ ಆತನು ತನ್ನನ್ನು ಕೊಟ್ಟನು. ನಮ್ಮ ಕರ್ತನಾದ ಯೇಸು ಕ್ರಿಸ್ತನ ಮುಖಾಂತರ ದೇವರ ಚಿತ್ತಕ್ಕೆ ನಮ್ಮನ್ನು ಧಾರಾಳವಾಗಿ ಕೊಡುವುದು ಭೂಲೋಕದಲ್ಲಿಯ ಪ್ರೀತಿಯ ಅತೀ ದೊಡ್ಡ ಅಳತೆಯಾಗಿದೆ.

> ನಾವು ದೇವರ ಮಕ್ಕಳನ್ನು ಪ್ರೀತಿಸುತ್ತೇವೆಂಬುದನ್ನು ದೇವರನ್ನು ಪ್ರೀತಿಸಿ ಆತನ ಆಜ್ಞೆಗಳನ್ನು ಅನುಸರಿಸುವದರಿಂದಲೇ ತಿಳಿದು ಕೊಳ್ಳುತ್ತೇವೆ. ದೇವರ ಮೇಲಣ ಪ್ರೀತಿ ಏನಂದರೆ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವುದೇಣಿ ಆತನ ಆಜ್ಞೆಗಳು ಭಾರವಾದವುಗಳಲ್ಲ (1 ಯೋಹಾನ 5:2, 3).

---

ಟಿಪ್ಪಣಿಗಳು

[1]Plato *The Republic* 427E-29B. [2]"*Immutability*" ಎಂದು ದೇವರ ಬದಲಾಗದ ಸ್ವಾಭಾವಕ್ಕೆ ಸಂಬಂಧಿಸಿರುತ್ತದೆ. [3]C. S. Lewis, *Mere Christianity* (New York: Macmillan Co., 1960), 115.